ಅರ್ಥದಲ್ಲಿ ಇದೊಂದು ಧಾರ್ಮಿಕ ಕಾವ್ಯವೇ ಹೌದಾದರೂ, ಪಂಪನು ಅಲ್ಲಲ್ಲಿ ಧರ್ಮದ ಚೌಕಟ್ಟನ್ನು ಒಡೆದು ಕಾವ್ಯಧರ್ಮಕ್ಕೆ ನ್ಯಾಯ ಒದಗಿಸುತ್ತಾನೆ. ಇದು ಅವನಿಗೂ ಗೊತ್ತಿದ್ದುದರಿಂದಲೇ 'ನೆಗಲ್ದ ಆದಿಪುರಾಣದೊಳ್ ಅಱಿವುದು ಕಾವ್ಯಧರ್ಮಮಂ ಧರ್ಮಮುಮಂ' ಎಂದು ಆತ್ಮವಿಶ್ವಾಸದಿಂದ ಹೇಳಿಕೊಂಡಿದ್ದಾನೆ. ಆದಿಪುರಾಣದ ಕಥೆಯ ಪ್ರಕಾರ, ಜಯವರ್ಮನೆಂಬುವನು ಮಹಾಬಳ, ಲಲಿತಾಂಗ, ವಜ್ರಜಂಘ, ಆರ್ಯ, ಶ್ರೀಧರದೇವ, ಸುವಿಧಿ, ಅಚ್ಯುತೇಂದ್ರ, ವಜ್ರನಾಭಿ, ಅಹಮಿಂದ್ರನಾಗಿ ಹುಟ್ಟಿ ಹತ್ತನೆಯ ಜನ್ಮದಲ್ಲಿ ಆದಿನಾಥನಾಗಿ ಜನಿಸುತ್ತಾನೆ. ಇವರೆಲ್ಲರೂ ಚಕ್ರವರ್ತಿಗಳು ಮತ್ತು ಎಲ್ಲ ಬಗೆಯ ಭೋಗಸುಖಗಳನ್ನು ಸವಿಯುವವರು. ಆದರೆ, ಒಂದು ಜನ್ಮದಿಂದ ಇನ್ನೊಂದು ಜನ್ಮಕ್ಕೆ ಬಂದಾಗ ಅವರ ಕರ್ಮಗಳು ಸವೆದು, ಭೋಗಲಾಲಸೆ ಕಡಿಮೆಯಾಗುತ್ತಾ ಹೋಗುತ್ತದೆ. ಈ ಭೋಗ ನಿರಸನ ಪ್ರಕ್ರಿಯೆಯನ್ನು ಪಂಪ ಬಹಳ ಅದ್ಭುತವಾಗಿ ವಿವರಿಸುತ್ತಾನೆ. ಮಹಾಬಳನ ಭೋಗ ತೀವ್ರತೆ, ಲಲಿತಾಂಗ ಸ್ವಯಂಪ್ರಭೆಯರ ಸುರತ ಸುಖ, ವಜ್ರಜಂಘ ಶ್ರೀಮತಿಯರ ಮಾಗಿದ ಪ್ರೇಮಗಳನ್ನು ಪಂಪ ವರ್ಣಿಸಿ ದಣಿಯನು. 'ಪ್ರಾಣವಲ್ಲಭರು ಜೊತೆಗೆ ಅಪ್ಪುಗೆಯಲ್ಲಿಯೇ ಸತ್ತರೆ ಅದಕ್ಕಿಂತ ಪುಣ್ಯವಿನ್ನೇನಿದೆ!' ಎಂದಾತ ಒಂದು ಹಂತದಲ್ಲಿ ಉದ್ಗರಿಸುತ್ತಾನೆ. ಈ ಭವಾವಳಿಯ ಕೊನೆಯಲ್ಲಿ ಆದಿನಾಥ ಜನಿಸುತ್ತಾನೆ. ಆದರೆ, ಇಷ್ಟರಲ್ಲಿ ಅವನ ಮನಸು ಮಾಗಿರುತ್ತದೆ, ಭೋಗಲಾಲಸೆ ಇಲ್ಲವಾಗಿರುತ್ತದೆ. ಇಂದ್ರನ ಆಸ್ಥಾನದಲ್ಲಿ ನಡೆಯುವ ನೀಲಾಂಜನೆಯ ನೃತ್ಯ ಸಂದರ್ಭದಲ್ಲಿ ಅಕಾಲ ಮರಣಕ್ಕೊಳಪಡುವ ಆಕೆಯನ್ನು ಕಂಡು ಆದಿನಾಥನು ಲೌಕಿಕದ ತೊಟ್ಟು ಕಳಚಿಕೊಳ್ಳುತ್ತಾನೆ. ಆ ಸಂದರ್ಭದಲ್ಲಿ ಆದಿನಾಥ ಹೇಳಿಕೊಳ್ಳುವ 'ಅನೇಕ ಜನ್ಮಗಳಲ್ಲಿ ಕಡಲ ನೀರು ಕುಡಿದು ಬಾಯಾರಿಕೆ ನೀಗಲಿಲ್ಲ, ಈಗ ಈ ಜನ್ಮದಲ್ಲಿ ಹುಲ್ಲಿನ ತುದಿಯ ನೀರಿನ ಪಸೆಯನ್ನು ಹೀರಿ ನನ್ನ ಬಾಯಾರಿಕೆ ನೀಗುವುದುಂಟೇ?' ಎಂಬ ಮಾತು ಅನ್ಯಾದೃಶವಾದುದು. ಆದಿನಾಥನ ಎರಡು ಮಕ್ಕಳಾದ ಭರತ ಮತ್ತು ಬಾಹುಬಲಿಯರ ಪ್ರಕರಣದ ಮೂಲಕ ಪಂಪನು ಅಹಂಕಾರದ ಎರಡು ಮಗ್ಗುಲುಗಳನ್ನು ನಮ್ಮ ಮುಂದಿಡುತ್ತಾನೆ. ಯುದ್ಧದಲ್ಲಿ ಗೆದ್ದ ರಾಜ್ಯವನ್ನು ಭರತನಿಗೆ ಬಿಟ್ಟುಕೊಟ್ಟಾಗ ಬಾಹುಬಲಿ ಹೇಳುವ ಮಾತುಗಳು ಬಹಳ ಪ್ರಸಿದ್ಧವಾದುದು: 'ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಂ ಈ ಭಟಖಡ್ಗಮಂಡಲೋತ್ಪಲವನ ವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ ವಲಯಮಂ ಅಯ್ಯನಿತ್ತುದುಮಂ ಆಂ ನಿನಗಿತ್ತೆಂ ಇದೇವುದಣ್ಣ ನೀನ್ ಒಲಿದ ಲತಾಂಗಿಗಂ ಧರೆಗಂ ಆಟಿಸಿದಂದು ನೆಗಟ್ತೆ ಮಾಸದೇ' (ಸೈನಿಕರ ಖಡ್ಗ ಸಮೂಹವೆಂಬ ಸರೋವರದಲ್ಲಿ ಸುಳಿದಾಡುವ ದುಂಬಿಯಂತಹ ರಾಜ್ಯಲಕ್ಷ್ಮಿಯು ನಿನ್ನ ಎದೆಯಲ್ಲಿಯೇ ಶಾಶ್ವತವಾಗಿ ನೆಲಸಲಿ. ಇದರಿಂದ ಏನಾದೀತು! ಅಲ್ಲದೆ, ಅಣ್ಣನಾದ ನೀನು ಒಲಿದ ಹೆಣ್ಣಿಗಾಗಲೀ ಮಣ್ಣಿಗಾಗಲೀ ಆಸೆಪಟ್ಟರೆ ನನಗೆ ಕೆಟ್ಟ ಹೆಸರು ಬಾರದೇ). ಆ ಬಳಿಕ ಬಾಹುಬಲಿ ತಪಸ್ಸಿಗೆ ತೆರಳುತ್ತಾನೆ. ಭರತ ಚಕ್ರವರ್ತಿಯಾಗಿ ಮುಂದುವರಿದರೂ ಕ್ರಮೇಣ ಅವನೂ ಪಕ್ವಗೊಳ್ಳುತ್ತಾನೆ.

ಅಧ್ಯಯನದ ಕಾಲಘಟ್ಟದಲ್ಲಿ ಶ್ರವಣಬೆಳಗೊಳದಲ್ಲಿ ಓಡಾಡಿದ್ದ ಪಂಪನ ಮೇಲೆ ಆಗಷ್ಟೇ ನಿರ್ಮಿತವಾಗಿದ್ದ ಗೊಮ್ಮಟೇಶ್ವರನು ಬಹಳ ಪ್ರಭಾವ ಬೀರಿರಬೇಕು. ಕನ್ನಡಿಗರಿಗೆ ಗೊಮ್ಮಟ ಒಂದು ಎತ್ತರವಾದರೆ, ಆದಿಪುರಾಣ ಇನ್ನೊಂದು ಎತ್ತರ. ಇವೆರಡನ್ನೂ ದರ್ಶಿಸಬಲ್ಲ ಕನ್ನಡಿಗರೇ ಭಾಗ್ಯಶಾಲಿಗಳು.

## ವಿಕ್ರಮಾರ್ಜುನ ವಿಜಯ ಅಥವಾ ಪಂಪಭಾರತ

14 ಆಶ್ವಾಸಗಳಿರುವ ಮತ್ತು 1609 ಪದ್ಯಗಳಿರುವ ಬೃಹತ್ ಕಾವ್ಯ 'ವಿಕ್ರಮಾರ್ಜುನ ವಿಜಯ'ವು ಪಂಪಭಾರತವೆಂದೇ ಕನ್ನಡಿಗರ ನಡುವೆ ಪ್ರಸಿದ್ಧ. ಇದನ್ನು ಪಂಪ ಆರುತಿಂಗಳಲ್ಲಿ ಬರೆದನಂತೆ. ಅವನ ಜೊತೆಗಿದ್ದ ಇತರ ವಿದ್ವಾಂಸರುಗಳು 'ಕಥೆ ಪಿರಿದಾದೊಡಂ, ಕಥೆಯ ಮೆಯ್ಗಿಡಲೀಯದೆ ಮುಂ ಸಮಸ್ತ ಭಾರತಮನಪೂರ್ವಮಾಗೆ ಪೇಳ್ದ ಕವೀಶ್ವರರಿಲ್ಲ, ಪೇಳ್ವೊಡೆ ಪಂಪನೆ ಪೇಳ್ಗುಂ' (ಬೃಹತ್ತಾದ ಮಹಾಭಾರತದ ಕಥೆಯನ್ನು ಯಾವುದೇ ಲೋಪವಿಲ್ಲದೆ ಹೇಳಿದ ಕವಿಗಳೇ ಇಲ್ಲ, ಹೇಳುವುದಾದರೆ ಅದು ಪಂಪನಿಗೆ ಮಾತ್ರ ಸಾಧ್ಯ) ಎಂದು ಹೇಳಿದ್ದರಿಂದ ತಾನು ಈ ಕಾವ್ಯವನ್ನು ಬರೆದೆ ಎಂದು ಪಂಪ ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. 'ಹಿತಮಿತಮೃದುವಚನಿ'ಯಾದ ಅವನಿಗೆ ಅದು ಸಾಧ್ಯವೂ ಆಯಿತು. ಮೂಲದಲ್ಲಿ ಲಕ್ಷಕ್ಕೂ ಹೆಚ್ಚು